ಆ) ಹಾಗಿದ್ದಲ್ಲಿ, ಮೈಸೂರು ಜಿಲ್ಲೆಯನ್ನು ಎರಡು ಜಿಲ್ಲೆಗಳನ್ನಾಗಿ ರಚಿಸುವ ಉದ್ದೇಶ ವಿದೆಯೇ, ಹಾಗಿದ್ದಲ್ಲಿ, ಯಾವ ರೀತಿ ಮತ್ತು ಯಾವ ತಾಲ್ಲೂಕುಗಳನ್ನು ಎಂಗಡಿಸುವ ಉದ್ದೇಶ ವಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ. (ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ಶಿಫಾರಸುಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೈಸೂರು ಜಿಲ್ಲೆಯನ್ನು ಈ ಕೆಳಕಂಡಂತೆ ಎರಡು ಹೊಸ ಜಿಲ್ಲೆಗಳನ್ನಾಗಿ ವಿಂಗಡಿಸಲು ಹುಂಡೇಕರ್ ಸಮಿತಿಯವರು ಶಿಫಾರಸು ಮಾಡಿರುತ್ತಾರೆ :

ನಂಜನಗೂಡು ಜಿಲ್ಲೆ :	ತಾಲ್ಲೂಕುಗಳು
ನಂಜನಗೂಡು ಉಪ ವಿಭಾಗ	ನಂಜನಗೂಡು, ಟಿ. ನರಸೀಪುರ
ಕೊಳ್ಳೇಗಾಲ ಉಪ ವಿಭಾಗ	ಕೊಳ್ಳೇಗಾಲ, ರಾಂಪುರ, ಯಳಂದೂರು,
ಚಾಮರಾಜನಗರ ಉಪ ವಿಭಾಗ	ಚಾಮರಾಜನಗ ಗುಂಡ್ಲುಪೇಟೆ.
ಮೈಸೂರು ಜಿಲ್ಲೆ :	
ಮೈಸೂರು ಉಪ ವಿಭಾಗ	ಮೈಸೂರು, ಕೆ.ಆರ್. ನಗರ
ಹುಣಸೂರು ಉಪ ವಿಭಾಗ	ಹುಣಸೂರು, ಹೆಗ್ಗಡದೇವನ ಕೋಟೆ, ಪಿರಿಯಾಪಟ್ಟಣ.

ಶಿಫಾರಸುಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಸಮುದಾಯ ಭವನಗಳ ನಿರ್ಮಾಣದ ಬಗ್ಗೆ

೫೬೧. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಡಿಯಲ್ಲಿ ಸಮುದಾಯ ಭವನಗಳನ್ನು ನಿರ್ಮಿಸುವ ಬಗ್ಗೆ ಸರಕಾರದವರು ಆದೇಶವನ್ನೇನಾದರೂ ನೀಡಿದ್ದಾರೆಯೇ ?

ಆ) ಕಳೆದ ಅಧಿವೇಶನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಬಿದರಹಳ್ಳಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸಮುದಾಯ ಭವನವನ್ನು ನಿರ್ಮಿಸುವ ಬಗ್ಗೆ ಮೇಲ್ಕಂಡ ಯೋಜನೆಯನ್ವಯ ಜಾಗ್ರತೆ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುವುದು ಎಂಬುದಾಗಿ ಆಶ್ವಾಸನೆ ನೀಡಿದ್ದುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ ಸದರಿ ಸಮುದಾಯ ಭವನದ ಕಟ್ಟಡದ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

ಆ) ನಿಜವಲ್ಲ.

ಇ) ಸದರಿ ಕಟ್ಟಡವನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಂ ೧೯೮೭-೮೮ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಆಳವಡಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲು ಆದೇಶ ವಿತ್ತಿರುತ್ತದೆ.

ಈ) ಉದ್ಭವಿಸುವುದಿಲ್ಲ.

ರಾಜ್ಯ ಮಟ್ಟದಲ್ಲಿ ಎಲ್ಲ ಧರ್ಮಗಳ ದೇವಸ್ಥಾನಗಳ ಅಭಿವೃದ್ಧಿಯ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ

೪೨೬. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಎಲ್ಲಾ ಧರ್ಮ ದೇವಸಾನಗಳ ಸಂಖ್ಯೆ ಎಷ್ಟು (ಧರ್ಮಗಳ ಪ್ರಕಾರ ವಿವರ ನೀಡಬೇಕಾಗಿ ವಿನಂತಿ)

ಆ) ರಾಜ್ಯದಲ್ಲಿ ದೇವಸ್ಥಾನಗಳಿಗಾಗಿ ಕಳೆದ ಮೂರು ವರ್ಷದಲ್ಲಿ ಧನಸಹಾಯ ನೀಡುವುದರಲ್ಲಿ ತಡವಾಗುತ್ತಿರುವುದಕ್ಕೆ ಕಾರಣವೇನು ?

ಇ) ದೇವಸ್ಥಾನಗಳಿಗೆ ಧನಸಹಾಯ ನೀಡುವಾಗ ರಾಜಕೀಯ ಒತ್ತಡದಿಂದ ಧನಸಹಾಯ ನೀಡಂತ್ತಿರುವುದು ನಿಜವೆ ?

ಈ) ಪರಿಶಿಷ್ಟ ಜನಾಂಗದ ಬಡಾವಣೆಗಳಲ್ಲಿ ಬರುವ ದೇವಸ್ಥಾನಗಳ ಅಭಿವೃದ್ಧಿಗಾಗಿ ಸರ್ಕಾರ ದಿಂದ ಕೊಡಬಹುದಾದ ಸಹಾಯವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ಎಲ್ಲಾ ಧರ್ಮದ ದೇವಸ್ಥಾನಗಳ ಸಂಖ್ಯೆ ಮಾಹಿತಿ ಇರುವುದಿಲ್ಲ. ಧಾರ್ಮಿಕ ಮತ್ತು ದತ್ತಿ ಇಲಾಖೆ ಆಡಳಿತಕೊಳ್ಳಪಟ್ಟಿರುವ ಸಂಬಂಧ ೪೦೭೮೦ ಧಾರ್ಮಿಕ ಸಂಸ್ಥೆಗಳಿವೆ.

ವಿವರ ಈ ರೀತಿ ಇದೆ :

ಹಿಂದೂ ದೇವಾಲಯ ಮತ್ತು ಟ್ರಸ್ಟ್‌ಗಳು	೪೦೫೫೪
ಜೈನ್ ಬಸದಿಗಳು ಮತ್ತು ಟ್ರಸ್ಟ್	೨೨೫
ಸಿಕ್ ಗುರುದ್ವಾರಗಳು	೧
ಒಟ್ಟು	೪೦೭೮೦

ಆ) ಪ್ರತಿ ವರ್ಷದ ಬಜೆಟ್‌ನಲ್ಲಿ ದೇವಸ್ಥಾನಗಳಿಗೆ ಧನಸಹಾಯ ಮಾಡಲು ಹಣ ಒದಗಿಸಿದ್ದರೂ ಪ್ರತಿಯೊಂದು ಪ್ರಕರಣದಲ್ಲೂ ತಯಾರಾದ ಪ್ಲಾನ್ ಮತ್ತು ಎಸ್ಟಿಮೇಟ್‌ಯನ್ನು ಧಾರ್ಮಿಕದತ್ತಿ ಆಯುಕ್ತರು ಅನುಮೋದಿಸಬೇಕು. ಈ ವಿಧಾನ ಅನುಸರಿಸಲು ಸುಮಾರು ಮೂರರಿಂದ ಆರು ತಿಂಗಳು ಬೇಕಾಗುತ್ತದೆ. ಅನಂತರ ಪ್ರಕರಣಗಳನ್ನು ಸರ್ಕಾರಕ್ಕೆ ಕಳುಹಿಸುತ್ತಾರೆ. ಬಜೆಟ್‌ನಲ್ಲಿ ಒದಗಿಸಿರುವ ಹಣ, ಮಂಜೂರಿಗೆ ಬೇಕಾದ ಹಣ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮಂಜೂರಾತಿ ಮಾಡಲಾಗುವುದು.